ಸದರೀ ದರಖಾಸ್ತುದಾರರಾದ ಕೆಂಚೇಗವ್ವಡರ ಅರ್ಜೀಯನ್ನು 1887ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಲಿಂಗೇಗವ್ವಡನ ಹೆಂಡತಿ ಚನ್ನಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಆಗಸ್ಟು ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನ ನಮ್ಮ ದಸ್ತಖತ್ತಿನೆ ಕೊಡೋಣಾಗಿದೆ.

ಸಿ. ಕೈನ್ಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟು 1887.

ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ರಜಿಸ್ಟ್ರೀ ಆಫೀಸಿನಲ್ಲಿ ಈ ಕೆಳಗೆ ವಿವರಿಸೋಣಾದ ರಜಿಸ್ಟ್ರಾದ 1 ತಂಸೂಕು 2 ಮ ರುಷಗಳಿಗೆ ಮೇಲ್ಪಟ್ಟ ಕಾಲದಿಂದ ಹಾಜರ್ಮಾಡಿದವನು ವಾಪಸ್ ಕೇಳದೇ ಇರುವ ಕಾರಣ ನಿಂತಿರುತ್ತೆ ಡಿಟೋ ತಂಸೂಕನ್ನು ಹಾಜರ್ಮಾಡಿ ದವನಾಗಲಿ ಅಥವಾ ವಾಪಸ್ ಪಡಿಯಲು ಅಧಿಕಾರ ಹೊಂದಿದವರಾಗಲಿ ಈ ಲಾಗಾಯ್ತು 1 ತಿಂಗಳೊಳಗೆ ಚಿಕ್ಕಬಳ್ಳಾಪುರ ಸಬ್ ರಜಿ ಸ್ಟ್ರಾರ್ರ ರೂಬರೂ ಹಾಜರಾಗಿ ರೂಲ್ಸ್ ಮೇರಿಗೆ ಪಾವತೀ ಮಾಡಬೇಕಾಗಿರುವ ಭವ್ಯ ಪಡಿಸಿದ ಫೀಜು ಪಾವತೀ ಮಾಡಿ ವಾಪಸ್ ಪಡೆಯ ಬಹುದು ತಪ್ಪಿದರೆ ರಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವದು:—

ರಜಿಸ್ಟ್ರಿಗೆ ಇಸವಿ ಪುಸ್ತಕ ನಂಬರ್.	ಕಕ್ಷಿಗಾರ್ರ ಹೆಸರು.		ಅಂಸೂಕಿನ ತಾರೀಖು.	ರಜಿಸ್ಟ್ರಿಗೆ ಹಾಜರ್ ಪಡಿಸಿದ ತಾರೀಖು.	ರಜಿಸ್ಟ್ರಾದ ತಾರೀಖು.	ಸ್ವಭಾವ.
	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.				
1885—86ನೇ ಇಸವಿ 82ನೇ ನಂಬರು.	ಪೇರೇಸಂದ್ರದಲ್ಲಿ ಇರುವ ಜಂಗಮಕೋಟಿ ಸಿಂಕಪುರಾಜು ನಂಗ ಸುಬ್ಬಿರಾಜು.	ಪೇರೇಸಂದ್ರದಲ್ಲಿ ಇರುವ ಚಿಟ್ಟಿರಾಮಯ್ಯನ್ನ ಕೂಡನೂರ ಸ್ವಾಮಯ್ಯ.	1885ನೇ ಇಸವಿ ಜೂನ್ ತಾರೀಖು 24.	1ನೇ [illegible] ತಾರೀಖು 26.	1885ನೇ ಇಸವಿ ಜೂನ್ ತಾರೀಖು 26.	ಪೇರೇಸಂದ್ರ ಗ್ರಾಮದ ಬಳಿ ಪೂರ್ವ ಕಡೆ ನೀರಿಂದಪಚ್ಚನ ತೋಪಿನ ಪಶ್ಚಿಮ ಇರುವ ಬರ ಬುಕೊಟ್ಟಿರುವ ಸ್ವಂತ ಕಾಯಿಯದ 73ನೇ ನಂಬರು ತೋ॥ ಜನಿರ್ಡ್ ೧೦॥ ಗುಂಟೆ ಜಮೀನನ್ನು 20 ರೂಪಾಯಿಗಳಿಗೆ ಕ್ರಯಕ್ಕೆ ಕೊಟ್ಟು ಇರುವುದು.

ಸಿ. ಸುಬ್ಬರಾವ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 419.

ಮೃತಪಟ್ಟ ಅರುಣಾಚಲ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಚಂದ್ರಶೇಖರ ಮೊದಲಿ, 2ನೇ ಲೋಕನಾಥಮೊದಲಿ, 3ನೇ ವಿಶ್ವನಾಥಮೊದಲಿ 2—3ನೇ ಪ್ಲೈನರ್‌ಗಾರ್ಡಿಯರ್ ಮೃತಪಟ್ಟ ಸದರೀ ಅರುಣಾಚಲ ಮೊದಲಿಯಾರ್ರಿಗೆ 1ನೇ ಅರ್ಜೀದಾರ್ರು ಮಕ್ಕಳಾಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಯಿಟ್ಟಿಗೇ